ಉಪತಹಶೀಲ್ದಾರವರ ನ್ಯಾಯಾಲಯ ನಾಡ ಕಛೇರಿ ಕೊಟ್ಟೂರು

ಸಂ/ಕಂ/ಹ.ಬ./ನಾ.ಕ.ಕೊ/52/2015-16.

ದಿನಾಂಕ:12-04-2016

| ಅರ್ಜಿದಾರರು | ತಕರಾರುದಾರರು |
|---|---|
| 1) ಉತ್ತಂಗಿ ಚನ್ನಬಸಪ್ಪ ತಂದೆ ಲಿಂಗಪ್ಪ<br>2) ಉತ್ತಂಗಿ ಪತ್ರೆಮ್ಮ ಗಂಡ ಲೇಟ್ ಉತ್ತಂಗಿ ಮರಳುಸಿದ್ದಪ್ಪ ತೂಲಹಳ್ಳಿ ಗ್ರಾಮ ಕೂಡ್ಲಿಗಿ ತಾ | 1) ಉತ್ತಂಗಿ ಸುರೇಶ ತಂದೆ ಚನ್ನಬಸಪ್ಪ ತೂಲಹಳ್ಳಿ ಗ್ರಾಮ ಕೂಡ್ಲಿಗಿ ತಾ<br>2) ಕಂದಾಯ ಪರಿವೀಕ್ಷಕರು ಕೊಟ್ಟೂರು |
| ಕೂಡ್ಲಿಗಿ ತಾಲೂಕು ತೂಲಹಳ್ಳಿ ಗ್ರಾಮದ ಸನಂ 344/ಜಿಪೈಕಿ. 345/ಎಪೈಕಿ. ವಿಸ್ತೀರ್ಣ 0-41. 0-87. ಎಕ್ರೆ ಜಮೀನುಗಳನ್ನು ಕ್ರಯ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ತೂಲಹಳ್ಳಿ ಗ್ರಾಮದ ಸ ನಂ 344/ಜಿಪೈಕಿ. 345/ಎಪೈಕಿ. ವಿಸ್ತೀರ್ಣ 0-41, 0-87.ಎಕ್ರೆ ಜಮೀನುಗಳನ್ನು ಸದರಿ ಗ್ರಾಮದ ಉತ್ತಂಗಿ ಪತ್ರೆಮ್ಮ ಗಂಡ ಲೇಟ್ ಉತ್ತಂಗಿ ಮರಳುಸಿದ್ದಪ್ಪ ಇವರಿಂದ ಸದರಿ ಗ್ರಾಮದ ಉತ್ತಂಗಿ ಚನ್ನಬಸಪ್ಪ ತಂದೆ ಲಿಂಗಪ್ಪ ಇವರು ದಿನಾಂಕ: 20-04-2015 ರ ಡಾಕುಮೆಂಟ್ ನಂ 217/2015-16 ರ ಪ್ರಕಾರ ಖರೀದಿಸಿ ಕೂಡ್ಲಿಗಿಯ ಉಪನೊಂದಾಣಾಧಿಕಾರಿಯ ಕಛೇರಿಯಲ್ಲಿ ನೊಂದಣಿ ಮಾಡಿಸಿಕೊಂಡಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ತೂಲಹಳ್ಳಿ ಇವರು ನಮೂನೆ-21 ರ ನೋಟಿಸನ್ನು ದಿನಾಂಕ 26-04-2015 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಗ್ರಾಮದ ಉತ್ತಂಗಿ ಸುರೇಶ ತಂದೆ ಚನ್ನಬಸಪ್ಪ ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 68/2014-15 ದಿನಾಂಕ 23-05-2015 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದೆಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸು ನೀಡಿ ದಿನಾಂಕ: 13-10-2015 ರಿಂದ 12-04-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆಯ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ತೂಲಹಳ್ಳಿ ಗ್ರಾಮದ ಸನಂ 344/ಜಿಪೈಕಿ. 345/ಎಪೈಕಿ. ವಿಸ್ತೀರ್ಣ 0-41 0-87. ಎಕ್ರೆ ಜಮೀನುಗಳನ್ನು ಸದರಿ ಗ್ರಾಮದ ಉತ್ತಂಗಿ ಪತ್ರೆಮ್ಮ ಗಂಡ ಲೇಟ್ ಉತ್ತಂಗಿ ಮರಳುಸಿದ್ದಪ್ಪ ಇವರಿಂದ ದಿನಾಂಕ: 20-04-2015 ಡಾಕುಮೆಂಟ್ ನಂ 217/2015-16 ರ ಪ್ರಕಾರ ರೂ.91000 ಗಳಿಗೆ ಖಂಡಿತ ಕ್ರಯಕ್ಕೆ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿಕೊಂಡಿರುತ್ತೇನೆ ಕಾರಣ ಸದರಿ ಕ್ರಯಪತ್ರ ಪ್ರಕಾರ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಹಾಜರಾಗಿದ್ದು ಸದರಿ ವಿವಾದಿತ ಜಮೀನಿನಲ್ಲಿ ಪಾಲು ಬರಬೇಕಾಗಿರುವುದರಿಂದ ಸದರಿ ಕ್ರಯಪತ್ರ ಪ್ರಕಾರ ಕ್ರಯದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ನನ್ನ ತಕರಾರು ಇರುವುದಾಗಿ ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರು ಮತ್ತು ತಕರಾರುದಾರರ ಹೇಳಿಕೆಗಳನ್ನು ಕೇಳಿ ತಕರಾರುದಾರರು ತಮ್ಮ ತಕರಾರು ಬಗ್ಗೆ ಯಾವುದೇ ದಾಖಲೆಗಳನ್ನು ಸಲ್ಲಿಸಿಲ್ಲದ ಕಾರಣ ಅವರ ತಕರಾರು ಅರ್ಜಿಯನ್ನು ತಳ್ಳಿ ಹಾಕಿ ಹಾಗೂ ಈ ಬಗ್ಗೆ ಕಂದಾಯ ಪರಿವೀಕ್ಷಕರು ಕೊಟ್ಟೂರು ಇವರು ಗ್ರಾಮದಲ್ಲಿ ಮರು ಪರಿಶೀಲನೆ ಮಾಡಲಾಗಿ ಕ್ರಯ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಯಾವುದೇ ಆಕ್ಷೇಪಣೆ ಇಲ್ಲವೆಂದು ವರದಿ ಸಲ್ಲಿಸಿರುತ್ತಾರೆ. ಕಾರಣ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 128 ರ ಅಡಿಯಲ್ಲಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**-:ಆದೇಶ:-**

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ತೂಲಹಳ್ಳಿ ಗ್ರಾಮದ ಸನಂ 344/ಜಿಪೈಕಿ. 345/ಎಪೈಕಿ. ವಿಸ್ತೀರ್ಣ 0-41. 0-87. ಎಕ್ರೆ ಜಮೀನುಗಳು ದಿನಾಂಕ:20-04-2015 ರ ಡಾಕುಮೆಂಟ್ ನಂ 217/2015-16 ರ ಕ್ರಯ ದಸ್ತಾವೇಜು ಪ್ರಕಾರ ಅರ್ಜಿದಾರರಾದ ಹಾಗೂ ಕ್ರಯದಾರರಾದ ಉತ್ತಂಗಿ ಚನ್ನಬಸಪ್ಪ ತಂದೆ ಲಿಂಗಪ್ಪ ತೂಲಹಳ್ಳಿ ಗ್ರಾಮ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ: 12-04-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಕೊಟ್ಟೂರು
ಕೊಟ್ಟೂರು

ಇದರ ಪ್ರತಿಯನ್ನು:

1) ಅರ್ಜಿದಾರರಾದ ಉತ್ತಂಗಿ ಚನ್ನಬಸಪ್ಪ ತಂದೆ ಲಿಂಗಪ್ಪ, ಉತ್ತಂಗಿ ಪತ್ರೆಮ್ಮ ಗಂಡ ಲೇಟ್ ಉತ್ತಂಗಿ ಮರಳುಸಿದ್ದಪ್ಪ ತೂಲಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಉತ್ತಂಗಿ ಸುರೇಶ ತಂದೆ ಚನ್ನಬಸಪ್ಪ ತೂಲಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕೆ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.